**1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ.2767/2022.**

ದಿನಾಂಕ **03.02.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿಯ ಹೆಸರು | : | ಸಚಿನ್ | ಪ್ರಾಸಾ-2 |
| ತಂದೆಯ  ಹೆಸರು | : | ರಾಮರಾವ್ | |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಮ್ಯಾನೇಜರ್  ಐಡಿಎಫ್‌ಸಿ, ಫಸ್ಟ್ ಬ್ಯಾಂಕ್, ಕಡೂರು ಶಾಖೆ | |
| ವಾಸ | : | ಕಡೂರು. | |

ಮುಖ್ಯ ವಿಚಾರಣೆಃ ದೂರುದಾರರ ಪರ ಶ್ರೀ ಸಿ ಓ ವೈ ವಕೀಲರಿಂದಃ-

ದೂರು ದಾರರು ನಮ್ಮ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತಾರೆ. ಸಂದರಿಯವರು ಎಸ್ ಬಿ ಐ ಬ್ಯಾಂಕ್ ಗೆ ಸಂಬಂಧಪಟ್ಟ ನಿಪಿ1 ಮತ್ತು 2 ಚೆಕ್ ಗಳನ್ನು ನಗಧೀಕರಣಕ್ಕೆಂದು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಚೆಕ್ ಗಳನ್ನು CTS ( Cheque Truncation System) ಮುಖಾಂತರ ಸ್ಕ್ಯಾನ್ ಮಾಡಿ central clearing hub ಮುಖಾಂತರ ಮುಖ್ಯ ಶಾಖೆಗೆ ಹೋಗಿ ನಂತರ ಸಂಬಂಧಪಟ್ಟ ಶಾಖೆಗೆ ಹೋಗಿ ಸದರಿ ಬ್ಯಾಂಕಿನಲ್ಲಿ ಖಾತೆದಾರರ ಖಾತೆಗೆ ಸಂಬಂಧಪಟ್ಟ ಮಾಹಿತಿಗಳು ನಮಗೆ ರಿಟರ್ನ್ ಮೆಮೋ ಮೂಲಕ ಆನ್ ಲೈನ್ ನಲ್ಲಿ ಬರುತ್ತದೆ. ನಿಪಿ 1 ಮತ್ತು 2 ಕ್ಕೆ ಸಂಬಂಧಪಟ್ಟಂತೆ CTS ಮುಖಾಂತರವಾಗಿ ನಿಪಿ 3 ರ ದಾಖಲೆ ಬಂದಿರುತ್ತದೆ. ನಿಪಿ 3 ರ ಮೊದಲ 2 ಸಾಲು ನಮೂದುಗಳು ಈ ಕೇಸಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ನಿಪಿ 3 ರಲ್ಲಿ ಇರುವ 3 ನೇ ಸಾಲು ಕೆಲವೊಮ್ಮೆ ಟೆಕ್ನಿಕಲ್ ಸಮಸ್ಯೆಗಳು ಇದ್ದಾಗ ಬೇರೆ ಚೆಕ್ ಗೆ ಸಂಬಂಧಪಟ್ಟ ಮಾಹಿತಿಯು ಸಹಃ ಒಂದೇ ಮೆಮೋದಲ್ಲಿ ಬಂದಿರುತ್ತದೆ, ಬೇಕಿದ್ದಲ್ಲಿ ಪ್ರತ್ಯೇಕವಾಗಿ ತೆಗೆದುಕೊಳ್ಳಬಹುದು. ನಿಪಿ 3 ರ 3 ನೇ ಸಾಲಿನಲ್ಲಿರುವ ನಮೂದು ಒಂದು ಕಂಪೆನಿಗೆ ಸಂಬಂಧಪಟ್ಟ ರಿರ್ಟನ್ ಮೆಮೋ ಆಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಕೆ ಆರ್ ವಕೀಲರಿಂದಃ-

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ತಾಂತ್ರಿಕ ದೋಷವಿದ್ದಾಗ ಬೇರೆ ಚೆಕ್ ಗಳ ಹಿಂಬರಹವು ಸಹಃ ಒಂದೇ ಮೆಮೋದಲ್ಲಿ ಬರುವ ಸಾದ್ಯತೆ ಇದ್ದರೆ ಆ ದಿನ ಆದಂತಹಃ ಎಲ್ಲಾ ಚೆಕ್ಕಿನ ವ್ಯವಹಾರಗಳ ಮೆಮೋವಿನ ವಿಚಾರಗಳು ಒಂದೇ ಮೇಮೋದಲ್ಲಿ ಬರಬೇಕಾಗಿತ್ತು ಎಂದರೆ ಸಾಕ್ಷಿಯು ಪ್ರತಿಯೊಂದು ಚೆಕ್ ಗೆ ನಾವು ಪ್ರತ್ಯೇಕ ಮೇಮೋವನ್ನು ಕೊಡುತ್ತೇವೆ ಒಂದು ವೇಳೆ ಪ್ರತ್ಯೇಕ ಮೆಮೋ ಜನರೇಟ್ ಆಗದಿದ್ದಾಗ ಒಂದೇ ಮೇಮೋದಲ್ಲಿ 2 ಚೆಕ್ ಗಳ ಮಾಹಿತಿಯನ್ನೆ ನೀಡುತ್ತೇವೆ.

ನಿಪಿ 3 ರಲ್ಲಿ 3 ನೇ ಸಾಲು Moainlaayur OPC Private Ltd company ಗೆ ಸಂಬಂಧಪಟ್ಟಿದ್ದಾಗಿರುತ್ತದೆ. ನಿಪಿ 3 ರ 3 ನೇ ಸಾಲಿನ ನಮೂದು ಸಹಃ ದೂರುದಾರರ ವ್ಯವಹಾರಕ್ಕೆ ಸಂಬಂಧಪಟ್ಟದ್ದು ಎಂದರೆ ಸರಿಯಲ್ಲ. ಪಿರ್ಯಾದಿಯು ನಮ್ಮ ಬ್ಯಾಂಕಿನ ಗ್ರಾಹಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ರ ದಾಖಲೆಯಲ್ಲಿನ ಮೂರು ನಮೂದುಗಳು ದೂರುದಾರರಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸಾಕ್ಷಿಯು ಕೇವಲ 2 ಸಾಲು ಮಾತ್ರ ದೂರುದಾರರಿಗೆ ಸಂಬಂಧಪಟ್ಟದ್ದು ಎಂದು ನುಡಿಯುತ್ತಾರೆ. ಈ ವ್ಯಹಾರದ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರು ಸಹಃ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ,
sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.